ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**
ನೂರ ನಲವತ್ತೊಂದನೆಯ ಅಧಿವೇಶನ
ಮಂಗಳವಾರ, ದಿನಾಂಕ: 29ನೇ ಸೆಪ್ಟಂಬರ್, 2020

ಲಾಕ್‌ಡೌನ್ ಸಮಯದಲ್ಲಿ ಗ್ಯಾಸ್ ಕಂಪನಿಗಳು & ನೌಕರರಿಗೆ ಒದಗಿಸಿದ ಸೌಲಭ್ಯಗಳ ಬಗ್ಗೆ

ಶ್ರೀ ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು):-

944(1082) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಲಾಕ್‌ಡೌನ್ ಸಮಯದಲ್ಲಿ ಗ್ಯಾಸ್ ಕಂಪನಿಗಳಿಗೆ ಯಾವ ರೀತಿಯ ಸೌಕರ್ಯ ಒದಗಿಸಲಾಗಿತ್ತು ;

(ಆ) ಕಡ್ಡಾಯ ಸೇವೆಯಾದ ಕಾರಣ ಅವರ ಸೇವೆಯನ್ನು ಸರ್ಕಾರ ಗುರುತಿಸಿದೆಯೇ ;

(ಇ) ಲಾಕ್‌ಡೌನ್ ಸಮಯದಲ್ಲಿ ಗ್ಯಾಸ್ ಕಂಪನಿಯ ಕಾರ್ಮಿಕರು ಮತ್ತು ವಾಹನ ಚಾಲಕರು ತಮ್ಮ ಜೀವನದ ಹಂಗು ತೊರೆದು ಕಾರ್ಯನಿರ್ವಹಿಸುತ್ತಿದ್ದು ಅವರಿಗೆ ಸರ್ಕಾರದಿಂದ ಸೌಲಭ್ಯಗಳನ್ನು ನೀಡಲಾಗಿದೆಯೇ ;

(ಈ) ಗ್ಯಾಸ್ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಾಲೀಕರಿಗಾಗಲಿ ಮತ್ತು ಕಾರ್ಮಿಕರಿಗಾಗಲಿ ವಿಮೆ ಮಾಡಿಸಲಾಗಿದೆಯೇ ;

(ಉ) ಗ್ಯಾಸ್ ಕಂಪನಿಯವರೆಗೆ ಆಗುವ ತೊಂದರೆಗಳನ್ನು ಯಾವ ಕಾಲಮಿತಿಯೊಳಗೆ ಬಗೆಹರಿಸಿ ಸೂಕ್ತ ಸೌಲಭ್ಯಗಳನ್ನು ಒದಗಿಸಲಾಗುವುದು?